ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ

ಆ) ಈ ಯೋಜನೆಯ ಕೊಳವೆಗಳಲ್ಲಿ ಸೋರುವಿಕೆ ಗೋಚರಿಸಿದಾಗ ಇದನ್ನು ವಾರ್ಷಿಕ ನಿರ್ವಹಣೆಯಲ್ಲಿ ದುರಸ್ತಿಪಡಿಸಿಕೊಂಡು ಅಚ್ಚುಕಟ್ಟುದಾರರಿಗೆ ಅನಾನುಕೂಲವಾಗದಂತೆ ನೀರಿನ ಲಭ್ಯತೆಗೆ ಅನುಗುಣವಾಗಿ ನೀರನ್ನು ಒದಗಿಸಲಾಗುತ್ತಿದೆ. ಯಾವುದೇ ಹೊಸ ಹುದ್ದೆಯನ್ನು ಭರ್ತಿ ಮಾಡಲು ಅಥವಾ ಹೊಸ ಹುದ್ದೆಯನ್ನು ಸೃಜಿಸಲು ನಿರ್ಬಂಧವಿರುವುದರಿಂದ ಸಿಬ್ಬಂದಿ ನೇಮಕ ಮಾಡಲಾಗಿಲ್ಲ.

564(700) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ, ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಮಂಜೂರಾದರೂ ಸಹ ಕಾಮಗಾರಿ ಪ್ರಾರಂಭಗೊಳ್ಳದ ಏತ ನೀರಾವರಿ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗಳನ್ನು ಯಾವ ಸಾಲಿನಲ್ಲಿ ಮಂಜೂರು ಮಾಡಲಾಗಿತ್ತು ಮತ್ತು ಅದರ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಗಳಿಗೆ ಈ ಸಾಲಿನಲ್ಲಿ ಹಣ ಮಂಜೂರು ಮಾಡಲಾಗುವುದೇ; ಎಷ್ಟು ಹಣ ಮಂಜೂರು ಮಾಡಲಾಗುವುದು; (ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮಂಜೂರಾಗಿ ಪ್ರಾರಂಭಗೊಳ್ಳದ ಯಾವ ಕಾಮಗಾರಿಯೂ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

565(788) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್.ಆರ್. ಪುರ-ಕುದುರೆಗುಂಡಿ-ಕೊಪ್ಪ ರಸ್ತೆ ಬೆಳ್ಳೂರು ಮಾರ್ಗವಾಗಿ ನಾದುರಸ್ಥಿಯಾಗಿ, ಸಾರ್ವಜನಿಕರ ಓಡಾಡಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಸಾಲಿನಲ್ಲಿ ಕೊಪ್ಪ, ಶೃಂಗೇರಿ ಮತ್ತು ಎನ್.ಆರ್. ಪುರ ತಾಲ್ಲೂಕುಗಳ ರಸ್ತೆಗಳ ನಿರ್ವಹಣೆಗಾಗಿ ನಿಗಧಿಪಡಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು;

ಇ) ಸರ್ಕಾರ ಈ ರಸ್ತೆಯನ್ನು ದುರಸ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವ)

ಅ) ಬಂದಿರುತ್ತದೆ

ಆ) ಕೊಪ್ಪ–ಶೃಂಗೇರಿ–ಎನ್.ಆರ್. ಪುರ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಒಟ್ಟು 395.10 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆ ಹೊಂದಿದ್ದು, 2003–04ನೇ ಸಾಲಿನಲ್ಲಿ ಒಟ್ಟು 36.96 ಲಕ್ಷಗಳಿಗೆ ಕಾರ್ಯಕ್ರಮದ ಪಟ್ಟಿ ಅನುಮೋದನೆಗೊಂಡಿರುತ್ತದೆ. ನಿರ್ವಹಣೆಗೆ ಖರ್ಚಾದ ವೆಚ್ಚ ರೂ.46,52,286.00ಗಳು ಆಗಿರುತ್ತದೆ.

ಇ) ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

566(572) : ಶ್ರೀ ಕುಪ್ಪಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೀಟರ್ ರಹಿತ ವಿದ್ಯುತ್ ಸಂಪರ್ಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಈ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ಕ್ರಮ ಕೈಗೊಂಡಿದೆಯೇ ಇಂತಹ ಮೀಟರ್ ಅಳವಡಿಕೆಯಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದು ಕಂಡು ಬಂದಿದೆಯೇ (ವಿವರ ನೀಡುವುದು);

ಇ) ಅವುಗಳನ್ನು ಎಲ್ಲಿಂದ ಖರೀದಿ ಮಾಡಲಾಯ್ತು ಮತ್ತು ಇದರ ಬೆಲೆ ಎಷ್ಟು;

ಈ) ಇದಕ್ಕೆ ನೀಡಿದ್ದ ಗ್ಯಾರಂಟಿ ಅವಧಿ ಎಷ್ಟು ಮತ್ತು ಆ ಪೈಕಿ ವಿಫಲವಾದ ವಿದ್ಯುತ್ ಮೀಟರ್‌ಗಳೆಷ್ಟು;

ಉ) ಇನ್ನು ಅಳವಡಿಸಲು ಉದ್ದೇಶಿಸಿರುವ ಮೀಟರ್‌ಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ತಗಲಿರುವ ವೆಚ್ಚವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದಿನಾಂಕ 31–3–2004 ರಲ್ಲಿದ್ದಂತೆ ರಾಜ್ಯದಲ್ಲಿರುವ ಮೀಟರ್ ರಹಿತ ವಿದ್ಯುತ್ ಸಂಪರ್ಕಗಳ ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ಮೀಟರ್ ರಹಿತ ಸ್ಥಾವರಗಳ ಸಂಖ್ಯೆ
1.	ಬೆಂಗಳೂರು ನಗರ	14.329
2.	ಬೆಂಗಳೂರು ಗ್ರಾಮಾಂತರ	208.717
3.	ಕೋಲಾರ	2,47,467
4.	ತುಮಕೂರು	2,53,075
5.	ದಾವಣಗೆರೆ	73.433
6.	ಚಿತ್ರದುರ್ಗ	1,24,141